**OS 103/2023**
**PW1**

ದಿನಾಂಕ:21.01.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎನ್ ಜಿ ವಕೀಲರಿಂದಃ

ನಾನು 6ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಸುಮಾರು 25 ವರ್ಷದಿಂದ ಬೆಂಗಳೂರಿನಲ್ಲಿ ವಾಸ ಇದ್ದೇನೆ.ಈರೆಗೌಡ ಮತ್ತು ವೀರಭದ್ರೆಗೌಡ ಅಲಿಯಾಸ್ ಗುಳ್ಳೆಗೌಡ ಅಣ್ಣ ತಮ್ಮದಿಂರು ಎಂದರೇ ಹೌದು. ವೀರಭದ್ರೆಗೌಡ ರವರು ಮರಣ ಹೊಂದಿದ್ದು ಸುಮಾರು 40 ವರ್ಷ ಆಗಿದೆ. ಈರೆಗೌಡ ರವರು ಯಾವಾಗ ಮೃತಪಟ್ಟಿದ್ದಾರೆ ಎಂದು ಗೊತ್ತಿಲ್ಲ ಆದರೆ 50 ವರ್ಷ ಆಗಿದೆ, ಈರೇಗೌಡ ರವರ ಹೆಂಡತಿ ಹೆಸರು ದೇವಿರಮ್ಮ ದೇವಮ್ಮಎಂದು ಹೇಳುತ್ತಾರೆ ನನ್ನ ತಾಯಿಯವರು ಹೇಳಿದ್ದರು ನನಗೆ ಸರಿಯಾಗಿ ಗೊತ್ತಿಲ್ಲ. ಈರೆಗೌಡ ರವರಿಗೆ ರುದ್ರಮ್ಮ ಮತ್ತು ಭದ್ರಮ್ಮ ಎಂಬ ಮಕ್ಕಳಿದ್ದರು. ಭದ್ರಮ್ಮರವರ ಯಜಮಾನರವರ ಹೆಸರು ಗೊತ್ತಿಲ್ಲ ಆದರೆ ಅವರನ್ನು ಕೊತ್ತಾನೂರಿಗೆ ಕೊಟ್ಟಿದ್ದರು. ಭದ್ರಮ್ಮನ ಹೆಸರು ಭದ್ರಕಾಳಮ್ಮ ಎಂದು ಅವರ ಗಂಡನವರ ಹೆಸರು ದುರ್ಗೆ ಗೌಡ ಎಂದರೇ ನನಗೆ ಗೊತ್ತಿಲ್ಲ. ಭದ್ರಕಾಳಮ್ಮ ನವರಿಗೆ 9 ಜನ ಮಕ್ಕಳು ಎಂದರೇ ನನಗೆ ಗೊತ್ತಿಲ್ಲ. ಅವರನ್ನು ದಾವೆಯಲ್ಲಿ ಸೇರಿಸಿರುವುದಿಲ್ಲ.

2. ರುದ್ರಮ್ಮ ನವರ ಗಂಡನ ಹೆಸರು ನನಗೆ ಗೊತ್ತಿಲ್ಲ. ಅವರಿಗೆ 3 ಜನ ಹೆಣ್ಣು ಮಕ್ಕಳು 1 ಗಂಡು ಮಗ. 3 ಜನ ಹೆಣ್ಣಮಕ್ಕಳ ಹೆಸರು ವಸಂತ, ಜಯಮ್ಮ, ಸರಸ್ವತಿ ಎಂದು, ಗಂಡು ಮಗನ ಹೆಸರು ಶಿವಸ್ವಾಮಿ ಎಂದು. 3 ಹೆಣ್ಣು ಮಕ್ಕಳನ್ನು ದಾವೆಯಲ್ಲಿ ಸೇರಿಸಿಲ್ಲ. ಪ್ರತಿವಾದಿಗೆ 3 ಜನ ಮಕ್ಕಳು. ಅವರನ್ನು ದಾವೆಯಲ್ಲಿ ಸೇರಿಸಿರುವುದಿಲ್ಲ. ವೀರಭದ್ರೆಗೌಡ ಅಲಿಯಾಸ್ ಗುಳ್ಳೆಗೌಡ ಅವರ ಹೆಂಡತಿ ಹೆಸರು ಕಾಳಮ್ಮ ಎಂದರೆ ಹೌದು. ಅವರಿಗೆ ಒಬ್ಬಳೇ ಮಗಳು ಭದ್ರಕಾಳಮ್ಮ ಎಂದರೇ ಹೌದು ಅವರಿಗೆ ಇನ್ನೊಂದು ಹೆಸರು ವೀರಮ್ಮ ಎಂದು. ಅವರ ಗಂಡನ ಹೆಸರು ತಿಮ್ಮೇಗೌಡ ಎಂದರೇ ಅಲ್ಲ ಮೋಟೆಗೌಡ. ವೀರಭದ್ರೆಗೌಡ ಅಲಿಯಾಸ್ ಗುಳ್ಳೆಗೌಡ ಮತ್ತು ಈರೇಗೌಡ ಇವರು 1975 ರ

ಪೂರ್ವದಲ್ಲಿ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿದ್ದರು ಎಂದರೇ ಇಲ್ಲ. ವೀರಭದ್ರೇಗೌಡ ಅಲಿಯಾಸ್ ಗುಳ್ಳೆಗೌಡ ತಮ್ಮ ಪಾಲಿಗೆ ಬಂದ ಸ್ವತ್ತನ್ನು ದಿನಾಂಕ 25.09.1980 ರಲ್ಲಿ ಸರ್ವೆ ನಂ 5/3 ರಲ್ಲಿ 1 ಎಕರೆ, ಸರ್ವೆ ನಂ 8/2 ರಲ್ಲಿ 14 ಗುಂಟೆ ಜಾಗವನ್ನು ಎರಡು ಕ್ರಯ ಪತ್ರದ ಮೂಲಕ ಪ್ರತಿವಾದಿಯ ಅತ್ತೆ ರುದ್ರಮ್ಮ ಮತ್ತು ಹಾಗೂ ಪ್ರತಿವಾದಿ ಗಂಡ ಶಿವಸ್ವಾ ಮಿ ರವರಿಗೆ ನೋಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಇಲ್ಲ. ಆಗಾಗಿ ವೀರಭದ್ರೇಗೌಡ ಅಲಿಯಾಸ್ ಗುಳ್ಳೆಗೌಡ ರವರಿಗೆ ಯಾವುದೇ ಆಸ್ತಿಗಳು ಉಳಿದಿರಲಿಲ್ಲ ಎಂದರೇ ಸರಿಯಲ್ಲ. ಆಗಾಗಿ ದಾವ ಆಸ್ತಿಗಳಿಗೂ ವೀರಭದ್ರೇಗೌಡ ಅಲಿಯಾಸ್ ಗುಳ್ಳೆಗೌಡ ರವರಿಗೂ ಯಾವುದೇ ಹಕ್ಕು ಬಾದ್ಯತೆ ಇಲ್ಲ ಎಂದರೆ ಸರಿಯಲ್ಲ.

3. ದಾವಾಆಸ್ತಿಗಳು ಪ್ರತಿವಾದಿಗೆ ಮತ್ತು ಆಕೆಯ ಗಂಡ ಹಾಗೂ ಅತ್ತೆ ಮತ್ತು ಮಾವ ವೀರಯ್ಯರವರಿಂದ ಬಂದ ಸ್ವತ್ತುಗಳಾಗಿದ್ದು ವೀರಭದ್ರೇಗೌಡ ಅಲಿಯಾಸ್ ಗುಳ್ಳೆಗೌಡ ರವರ ಕುಟುಂಬದವರಿಗೆ ಆ ಆಸ್ತಿಗಳಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಹಾಗೂ ನೀವು ವೀರಭದ್ರೇಗೌಡ ಅಲಿಯಾಸ್ ಗುಳ್ಳೆಗೌಡ ರವರ ವಾರಸುದಾರರೆಂದು ಸುಳ್ಳು ದಾವೆ ಸಲ್ಲಿಸಿರುವುದರಿಂದ ನಿಮಗೂ ಸಹ ಹಕ್ಕು ಇರುವುದಿಲ್ಲ ಎಂದರೇ ಸರಿಯಲ್ಲ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದೂಡಲಾಯಿತು**).**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**(ಸಾ.ಓ.ಹೇ.ಕೇ.ಸ.ಇ.ಎ.ಒ)**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು.)**

ಯಾವುದೇ ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲ.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು)**

**(ಈ ಹಂತದಲ್ಲಿ ಪ್ರತಿವಾದಿಯ ವಿರುದ್ಧ ಏಕತರ್ಫಿಯ ಆದೇಶ ಮಾಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)**

**(ಈ ಹಂತದಲ್ಲಿ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಹಾಗೂ ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು. )**